**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು**

**ತಾಂತ್ರಿಕ ಶಿಕ್ಷಣ ಇಲಾಖೆಯ ನಡವಳಿಗಳು**

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯ ಸಂಸ್ಥೆಗಳಲ್ಲಿ ಖಾಲಿಯಿರುವ ಕಾರ್ಯಾಗಾರ ವಿಭಾಗದ ಉಳಿದ ಮೂಲ ವೃಂದದ ಶಿಕ್ಷಕರ(ಇನ್‌ಸ್ಟ್ರಕ್ಟರ್)(ಆಟೋಮೊಬೈಲ್) ಮುಂಬಡ್ತಿ ಹುದ್ದೆಗಳನ್ನು ಸಹ ಶಿಕ್ಷಕರ(ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್) (ಆಟೋಮೊಬೈಲ್) ವೃಂದದಿಂದ ಮುಂಬಡ್ತಿ ಮೂಲಕ ತುಂಬುವ ಕುರಿತು.

ಉಲ್ಲೇಖ:
1. ಈ ಕಛೇರಿ ಅಧಿಸೂಚನೆ ಸಂಖ್ಯೆ: ಡಿಟಿಇ 09 ಇಎಸ್‌ಟಿ(3) 2019, ದಿ: 03.08.2019 ರಲ್ಲಿ ಪ್ರಕಟಿಸಲಾಗಿರುವ ತಾಂತ್ರಿಕ ಶಿಕ್ಷಣ ಇಲಾಖೆಯ ಸಹ ಶಿಕ್ಷಕರ (ಆಟೋಮೊಬೈಲ್) ವೃಂದದ ಅಂತಿಮ ಜೇಷ್ಠತಾ ಪಟ್ಟಿ
2. ದಿನಾಂಕ: 25.05.2023 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ.

*****

ಪ್ರಸ್ತಾವನೆ:

ತಾಂತ್ರಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಕಾರ್ಯಾಗಾರ ವಿಭಾಗದಲ್ಲಿನ ವಿವಿಧ ವಿಭಾಗಗಳ ಶಿಕ್ಷಕರು(ಇನ್‌ಸ್ಟ್ರಕ್ಟರ್) ಹುದ್ದೆಗಳಿಗೆ ಆಯಾ ವಿಭಾಗದ ಸಹ ಶಿಕ್ಷಕರು (ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್) ಹುದ್ದೆಯಿಂದ ಶೇಕಡ 50 ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ(1) ರಂತೆ ಪ್ರಕಟಿಸಲಾಗಿರುವ ತಾಂತ್ರಿಕ ಶಿಕ್ಷಣ ಇಲಾಖೆಯ ಸಹ ಶಿಕ್ಷಕರ (ಆಟೋಮೊಬೈಲ್) ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿಯ ಅನುಸಾರ ಕಾರ್ಯಾಗಾರ ವಿಭಾಗದ ಶಿಕ್ಷಕರ(ಇನ್‌ಸ್ಟ್ರಕ್ಟರ್)(ಆಟೋಮೊಬೈಲ್) ವೃಂದದಲ್ಲಿ ಖಾಲಿಯಿರುವ ಮುಂಬಡ್ತಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಬೇಕಾಗಿರುತ್ತದೆ. ಈ ಸಂಬಂಧ ದಿನಾಂಕ: 25.05.2023 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಖಾಲಿಯಿರುವ ಶಿಕ್ಷಕರ(ಇನ್‌ಸ್ಟ್ರಕ್ಟರ್)(ಆಟೋಮೊಬೈಲ್) ಮುಂಬಡ್ತಿ ಹುದ್ದೆಗಳನ್ನು ಜೇಷ್ಠತೆ, ಅರ್ಹತೆ, ಮೀಸಲಾತಿ ನಿಯಮಗಳ ಆಧಾರದ ಮೇಲೆ ಅರ್ಹ ಸಹ ಶಿಕ್ಷಕರು(ಆಟೋಮೊಬೈಲ್) ಗಳಿಗೆ ಮುಂಬಡ್ತಿ ನೀಡಲು ತೀರ್ಮಾನಿಸಿ, ಸದರಿ ಅರ್ಹ ಸಹ ಶಿಕ್ಷಕರುಗಳಿಗೆ ಮುಂಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯಲ್ಲಿ ಶಿಫಾರಸ್ಸು ಮಾಡಲಾಗಿದೆ.

ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ ಹಾಗೂ ಶಿಫಾರಸ್ಸಿನಂತೆ ಸಹ ಶಿಕ್ಷಕರ(ಆಟೋಮೊಬೈಲ್) ವೃಂದದಿಂದ ಶಿಕ್ಷಕರ(ಆಟೋಮೊಬೈಲ್) ವೃಂದಕ್ಕೆ ಬಡ್ತಿ ಹೊಂದಲು ಅರ್ಹರಿರುವ ಸಹ ಶಿಕ್ಷಕರು(ಆಟೋಮೊಬೈಲ್)ಗಳಿಗೆ ಶಿಕ್ಷಕರ(ಆಟೋಮೊಬೈಲ್) ಹುದ್ದೆಗೆ ಮುಂಬಡ್ತಿ ನೀಡಿ ಸ್ಥಳನಿಯುಕ್ತಿ ಆದೇಶ ಹೊರಡಿಸಬೇಕಾಗಿರುವುದರಿಂದ, ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: DTE-ADMIOEST(4)/17/2023,**/173 **ದಿನಾಂಕ:30.05.2023**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ಈ ಕೆಳಕಂಡ ಸಹ ಶಿಕ್ಷಕರು(ಆಟೋಮೊಬೈಲ್)ಗಳಿಗೆ ಗ್ರೂಪ್-ಸಿ ವೃಂದದ ರಾಜ್ಯ ವೇತನ ಶ್ರೇಣಿ ರೂ. 33450-850-36000-950-39800-1100-46400-1250-53900-1450-62600 ರಲ್ಲಿನ ಶಿಕ್ಷಕರ (ಆಟೋಮೊಬೈಲ್) ಹುದ್ದೆಗೆ ತಾತ್ಕಾಲಿಕವಾಗಿ ಹಾಗೂ ಮುಂದಿನ ಆದೇಶದವರೆಗೆ ಮುಂಬಡ್ತಿ ನೀಡಿ ಅವರ ಹೆಸರಿನ ಮುಂದೆ ಸೂಚಿಸಿರುವ ಖಾಲಿ ಹುದ್ದೆಗೆ ಎದುರಾಗಿ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ. ಸಂ. | ಸಹ ಶಿಕ್ಷಕರ ಹೆಸರು | ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯ ಹೆಸರು | ಶಿಕ್ಷಕರ ಹುದ್ದೆಗೆ ಮುಂಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಲಾದ ಸಂಸ್ಥೆ |
|---|---|---|---|
| ಉಳಿದ ಮೂಲ ವೃಂದ | | | |
| 1. | ಪಿ.ಸುರೇಶ್‌ಬಾಬು | ಡಿ.ಎ.ಸಿ.ಜಿ. ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು | ಡಿ.ಎ.ಸಿ.ಜಿ. ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು |
| 2. | ಚಂದ್ರಶೇಖರಯ್ಯ | ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು | ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು |

ಬಡ್ತಿ ಹೊಂದಿರುವ ಸಹ ಶಿಕ್ಷಕರುಗಳು ಆದೇಶದ ಪ್ರತಿಯನ್ನು ಇಲಾಖಾ ವೆಬ್‌ಸೈಟ್‌ನಿಂದ ಪಡೆದು ಸ್ಥಳನಿಯುಕ್ತಿಗೊಳಿಸಲಾದ ಸಂಸ್ಥೆಯಲ್ಲಿ ಈ ಆದೇಶ ತಲುಪಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಬಡ್ತಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

ಬಡ್ತಿ ಹೊಂದಿರುವ ಸಹ ಶಿಕ್ಷಕರುಗಳ ಪೈಕಿ ಯಾರಾದರೂ ಪ್ರಸ್ತುತ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ, ಸದರಿ ನಿಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಇವರಿಗೆ:-

1. ಸಂಬಂಧಪಟ್ಟ ಸಹ ಶಿಕ್ಷಕರುಗಳಿಗೆ(ಸಂಬಂಧಿಸಿದ ಪ್ರಾಂಶುಪಾಲರ ಮೂಲಕ);
2. ಸಂಬಂಧಪಟ್ಟ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ - ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ;
3. ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ;
4. ನೋಡಲ್ ಅಧಿಕಾರಿ, ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು).

ಪ್ರತಿ:-

1 ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;

2 ಶಾಖಾ ರಕ್ಷಾ ಕಡತ.